ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: SIT - ಸಿಡಿ ಪ್ರಕರಣ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE: 12/3/21

## ವಿಡಿಯೋ ಎಡಿಟರ್ ಜತೆ ಹ್ಯಾಕರ್ ಕೂಡ ನಾಪತ್ತೆ

# ಎಸ್‌ಐಟಿ ಶಿಕಾರಿಗೆ ಗಡಗಡ

ಶಿವಕುಮಾರ್ ಮೆಣಸಿನಕಾಯಿ

ಬೆಂಗಳೂರು: ರಾಸಲೀಲೆ ಹಗರಣದ ಸಿ.ಡಿ.ಯನ್ನು ಎಡಿಟ್ ಮಾಡಿದ ಖಾಸಗಿ ಟಿವಿ ಚಾನೆಲ್‌ನ ಮಾಜಿ ಉದ್ಯೋಗಿಯ ಜತೆ ಎಡಿಟ್ ಮಾಡಿದ ಸಿ.ಡಿ. ದೃಶ್ಯಾವಳಿಗಳನ್ನು ಸರ್ವರ್‌ಗೆ ಅಪ್‌ಲೋಡ್ ಮಾಡಲು ಕೈ ಜೋಡಿಸಿದ ಹ್ಯಾಕರ್ ಕೂಡ ಬೆಂಗಳೂರಿನಿಂದ ನಾಪತ್ತೆಯಾಗಿದ್ದಾನೆ ಎನ್ನಲಾಗಿದ್ದು, ಇವರಿಬ್ಬರ ಪತ್ತೆಗೆ ಬೆಂಗಳೂರು ಪೊಲೀಸರು ಮುಂದಾಗಿದ್ದಾರೆ. ಈ ಇಬ್ಬರು ವ್ಯಕ್ತಿಗಳು ಹಿಂದೆಯೂ ಮತ್ತೊಬ್ಬ ಮಾಜಿ ಸಚಿವರ ಖಾಸಗಿ ದೃಶ್ಯಗಳನ್ನು ಲೀಕ್ ಮಾಡುವಲ್ಲಿ ಶಾಮೀಲಾಗಿದ್ದರು ಎಂಬ ವಿಷಯ ಹೊರಬಿದ್ದಿದೆ.

ಮಾಜಿ ಸಚಿವ ರಮೇಶ್ ಜಾರಕಿಹೊಳಿ ಸರ್ಕಾರಕ್ಕೆ ಪತ್ರ ಬರೆದು ತಮ್ಮ ವಿರುದ್ಧ ರಾಜಕೀಯ ಷಡ್ಯಂತ್ರ ನಡೆದಿದ್ದು, ತನಿಖೆ ನಡೆಸುವಂತೆ ಕೋರಿದ ಕಾರಣಕ್ಕಾಗಿ ರಾಜ್ಯ ಸರ್ಕಾರ ಬುಧವಾರ ರಾತ್ರಿ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚನೆಯಾದ ಕೆಲವೇ ಗಂಟೆಗಳಲ್ಲಿ ಎಸ್‌ಐಟಿ ಅಧಿಕಾರಿಗಳು ಬೆಂಗಳೂರಿನ ಎರಡು ಮಾಧ್ಯಮ ಸಂಸ್ಥೆಗಳಿಂದ ಮಾಹಿತಿ ಪಡೆದಿದ್ದಾರೆ. ವಿಡಿಯೋ ಎಡಿಟ್ ಮಾಡಿದ ವ್ಯಕ್ತಿ ಹಾಗೂ ಆತನೊಂದಿಗೆ ಬಹುದಿನಗಳಿಂದ ಸಂಪರ್ಕ ಹೊಂದಿರುವ ಮತ್ತೊಬ್ಬ ವ್ಯಕ್ತಿಯ ಬಗೆಗೆ ಮತ್ತೊಂದು ಮಾಧ್ಯಮ ಸಂಸ್ಥೆಯಿಂದ ಪೊಲೀಸರು ವಿವರಗಳನ್ನು ಕಲೆ ಹಾಕಿದ್ದಾರೆ. ಸದ್ಯಕ್ಕೆ ಇಬ್ಬರೂ ವ್ಯಕ್ತಿಗಳು ತಲೆಮರೆಸಿಕೊಂಡಿದ್ದಾರೆ ಎಂದು ಹೇಳಲಾಗಿದೆ. ಸಿ.ಡಿ. ಪ್ರಕರಣದಲ್ಲಿ ಭಾಗಿಯಾಗಿರುವ ವಿಡಿಯೋ ಎಡಿಟರ್‌ನ ಸಹಚರನನ್ನು ಮೂರು ದಿನಗಳ ಹಿಂದಷ್ಟೇ ಮಾಧ್ಯಮ ಸಂಸ್ಥೆಯೊಂದು ಕೆಲಸದಿಂದ ವಜಾ ಮಾಡಿದೆ.

ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯಲ್ಲಿ ದಾಖಲಾದ ದೂರಿನ ಪ್ರಕರಣದಲ್ಲಿ ಸಿ.ಡಿ. ಎಡಿಟ್ ಮಾಡಿದ ವ್ಯಕ್ತಿಯ ಸುಳಿವು ಪಡೆದ ಪೊಲೀಸರಿಗೆ



ಇದೇ ಇಬ್ಬರೂ ವ್ಯಕ್ತಿಗಳು ಕಳೆದ 2018ರಲ್ಲಿ ಮಾಜಿ ಸಚಿವರೊಬ್ಬರ ಖಾಸಗಿ ದೃಶ್ಯಗಳನ್ನು ಲೀಕ್ ಮಾಡಿದ ಪ್ರಕರಣದಲ್ಲೂ ಶಾಮೀಲಾಗಿದ್ದರು ಎಂಬ ವಿಷಯ ಬಯಲಿಗೆ ಬಂದಿದೆ. ಆದರೆ ಆಗ ಮಾಜಿ ಸಚಿವರು ವಿರೋಧ ಪಕ್ಷದಲ್ಲಿ ಇದ್ದುದರಿಂದ ಆ ಪ್ರಕರಣವು ಹೆಚ್ಚು ಚರ್ಚೆ ಆಗಲಿಲ್ಲ. ಅಲ್ಲದೇ ಕೆಲ ದಿನಗಳ ನಂತರ ಶಾಸಕರಿದ್ದ ಪಕ್ಷ ಅಧಿಕಾರಕ್ಕೆ ಬಂದರೂ ಅವರು ತತ್‌ಕ್ಷಣಕ್ಕೆ ಮಂತ್ರಿ ಆಗಲಿಲ್ಲ. ಹೀಗಾಗಿ ಆ ಪ್ರಕರಣದಲ್ಲಿ ಪೊಲೀಸರಿಗೆ ಅಧಿಕೃತ ದೂರು ದಾಖಲಾಗದೇ ಇದ್ದುದರಿಂದ ಇವರಿಬ್ಬರೂ ಬಚಾವ್ ಆಗಿದ್ದರು ಎನ್ನಲಾಗಿದೆ.

ಆದಾದ ಬಳಿಕ ಮಾರ್ಚ್ 2ರಂದು ಕಬ್ಬನ್ ಪಾರ್ಕ್ ಠಾಣೆಯಲ್ಲಿ ದಾಖಲಾದ ದೂರಿನ ಪ್ರಕರಣದ ಹಿನ್ನೆಲೆಯಲ್ಲಿ ಇದೇ ಇಬ್ಬರೂ ವ್ಯಕ್ತಿಗಳು ಇದ್ದಾರೆ ಎಂಬ ಸುಳಿವು ಪೊಲೀಸರಿಗೆ ಗೊತ್ತಾಗಿದೆ. ಇಬ್ಬರೂ ವ್ಯಕ್ತಿಗಳ ದೂರವಾಣಿ ಕರೆಗಳ ವಿವರಗಳ, ಫೇಸ್‌ಬುಕ್ ಖಾತೆ ಸೇರಿದಂತೆ ಹಲವಾರು ಮಾಹಿತಿಗಳನ್ನು ಕಲೆಹಾಕಿದ ನಂತರ ವಿವಾದಿತ ಸಿ.ಡಿ.ಯನ್ನು ಇದೇ ವ್ಯಕ್ತಿಗಳು ಎಡಿಟ್ ಮಾಡಿ, ಬೇರೆ ಬೇರೆ ಸರ್ವರ್‌ಗಳ ಮೂಲಕ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದಾರೆ ಎಂದು ಹೇಳಲಾಗುತ್ತಿದೆ.

ಕಳೆದ ಒಂದು ವರ್ಷದಿಂದ ಉದ್ಯೋಗ

- ವಿಡಿಯೋ ಎಡಿಟರ್ ಜತೆ ಹ್ಯಾಕರ್ ನಾಪತ್ತೆ ಶಂಕೆ
- ಮಾಧ್ಯಮ ಸಂಸ್ಥೆಯಿಂದ 'ಹ್ಯಾಕರ್' ವಜಾ
- ಸ್ಟಿಂಗ್ ಆಪರೇಶನ್ ಹೆಸರಲ್ಲಿ ಹನಿಟ್ರ್ಯಾಪ್ ಶಂಕೆ
- ಮಾಧ್ಯಮ ಸಂಸ್ಥೆಗಳಿಂದ ಎಸ್‌ಐಟಿ ಮಾಹಿತಿ ಸಂಗ್ರಹ

ಇಲ್ಲದಿದ್ದರೂ ವಿಡಿಯೋ ಎಡಿಟ್ ಮಾಡಿದ ವ್ಯಕ್ತಿ ಇತ್ತೀಚೆಗೆ ದುಬಾರಿ ಹಾಗೂ ಐಷಾರಾಮಿ ಕಾರು ಖರೀದಿ ಮಾಡಿದ್ದಾನೆ ಎಂಬ ಮಾಹಿತಿ ಪೊಲೀಸರಿಗೆ ಸಿಕ್ಕಿದೆ. ಇವರಿಬ್ಬರೂ ಈ ಹಿಂದೆ ಒಂದೇ ಮಾಧ್ಯಮ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದರು. ಒಂದು ವರ್ಷದಿಂದ ಈಚೆಗೆ ಬೇರೆ ಬೇರೆ ಕಂಪನಿಗಳಿಗೆ ಸೇರಿಕೊಂಡಿದ್ದರೂ ಕೂಡ ಇಬ್ಬರೂ ಸೇರಿಯೇ ಕೆಲವು ಗುತ್ತಿಗೆ ಕೆಲಸಗಳನ್ನು ಮಾಡುತ್ತಿದ್ದರು. ಆ ಪೈಕಿ ತಾಂತ್ರಿಕವಾಗಿ ಅಪಾರ ಜ್ಞಾನ ಹೊಂದಿದ್ದ ಎರಡನೇ ವ್ಯಕ್ತಿ 'ಹ್ಯಾಕರ್' ಆಗಿದ್ದ ಎಂಬ ವಿಷಯ ಇದೀಗ ಪೊಲೀಸರಿಗೂ ಕುತೂಹಲ ಹುಟ್ಟಿಸಿದೆ. ಇವರಿಬ್ಬರೂ ಈ ಹಿಂದೆ ಯಾವ ಯಾವ ಸಂಸ್ಥೆಗಳಲ್ಲಿ ಕೆಲಸ ಮಾಡಿದ್ದರು ಎಂಬ ಮಾಹಿತಿಯನ್ನು ಪೊಲೀಸರು ಕಲೆ ಹಾಕುತ್ತಿದ್ದಾರೆ. ಮೇಲ್ನೋಟಕ್ಕೆ ರಾಜ್ಯ ಸರ್ಕಾರ ಎಸ್‌ಐಟಿ ತಂಡವನ್ನು ಬುಧವಾರ ರಾತ್ರಿ ಪ್ರಕಟಿಸಿದ್ದರೂ, ಈ ವಿಶೇಷ ತಂಡ ಈಗಾಗಲೇ ತನಿಖೆಯನ್ನು ಆರಂಭಿಸಿದೆ ಎಂದು ಹೇಳಲಾಗಿದೆ. ಮುಂದಿನ ಒಂದೆರಡು ದಿನಗಳಲ್ಲಿ ಎಸ್‌ಐಟಿ ಮಹತ್ವದ ವಿಷಯವನ್ನು ಹೊರಗೆಡವಲಿದೆ ಎನ್ನುತ್ತವೆ ಉನ್ನತ ಪೊಲೀಸ್ ಮೂಲಗಳು.